ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 92/2011**

**ಫ್ರಾಸಾ- 74 ಚಾಸಾ- 91**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಹೇಮಂತ್ ಕುಮಾರ್ |
| ತಂದೆಯ ಹೆಸರುಃ | : | ಲೇಟ್ ಚಿದಾನಂದಮೂರ್ತಿ |
| ವಯಸ್ಸುಃ | : | 59 ವರ್ಷ |
| ಉದ್ಯೋಗಃ | : | ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ |
| ವಾಸ | : | ತುಮಕೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 29-08-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಡಿಸೆಂಬರ್ 2008ರಿಂದ ಸೆಪ್ಟೆಂಬರ್ 2009ರವರೆಗೆ ನಾನು ಹಾಸನ ಆರ್.ಟಿ.ಒ. ಕಛೇರಿಯಲ್ಲಿ ಮೋಟಾರ ವಾಹನ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 11-5-2009ರಂದು ಕರ್ನಾಟಕ ಲೋಕಾಯುಕ್ತ ಚಿಕ್ಕಮಗಳೂರು ಇದರ ಪೊಲೀಸ್ ಉಪಾಧೀಕ್ಷಕರು ವಾಹನ ಸಂಖ್ಯೆ ಕೆಎ-13-ಕ್ಯು-8626ರ ಇಂಧನ ವೆಚ್ಚ, ಮತ್ತು ಆಯಿಲ್ ವೆಚ್ಚದ ಬಗ್ಗೆ ನಿಗಧಿಪಡಿಸಲು ಕೇಳಿಕೊಂಡಿದ್ದರು. ಅದರಂತೆ ಇಂಧನ ವೆಚ್ಚ ರಿಪೇರಿ ವೆಚ್ಚ, ಆಯಿಲ್ ಸರ್ವೀಸ್ ಅಂದಾಜು 37,519ರೂಪಾಯಿ ಎಂದು ನಿಗಧಿಪಡಿಸಿ ಲೋಕಾಯುಕ್ತ ಕಛೇರಿಗೆ 17-6-19ರಂದು ಕಳುಹಿಸಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ನಿಪಿ-135 ಎಂದು ಅದರಲ್ಲಿ ನನ್ನ ರುಜು ಇದ್ದು ನಿಪಿ-135(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ಶ್ರೀ ಬಿ ಜೆ ಪಿ ಎಸ್ ವಕೀಲರಿಂದಃ**

ಲೋಕಾಯುಕ್ತ ಅಧಿಕಾರಿಗಳು ನನಗೆ ಆ ವಾಹನಕ್ಕೆ ಸಂಬಂಧಿಸಿದ ಯಾವುದೇ

ದಾಖಲಾತಿಗಳನ್ನು ಕಳುಹಿಸಿರಲಿಲ್ಲ. ಎಲ್ಲಿ ರಿಪೇರಿ ಮಾಡಿಸಿದ್ದರು ಎನ್ನುವ ಬಗ್ಗೆ ಮಾಹಿತಿ ಕೊಟ್ಟಿರಲಿಲ್ಲ. ನಾನು ಆ ವಾಹನವನ್ನು ಖುದ್ದಾಗಿ ಪರಿಶೀಲಿಸಿಲ್ಲ. ಆ ವಾಹನಕ್ಕೆ ಎಷ್ಟು ಇಂಧನ ಬಳಸಿದ್ದರು ಎನ್ನುವ ಬಗ್ಗೆ ಮಾಹಿತಿ ಇಲ್ಲ. ವಾಹನ ಇಷ್ಟು ಕಿಮೀ ಓಡಿದರೆ ಇಷ್ಟು ಖರ್ಚಾಗುತ್ತದೆ ಎಂಬ ಮಾಹಿತಿ ನಮ್ಮಲ್ಲಿ ಇರುತ್ತದೆ, ಅದರಂತೆ ನೀಡಿರುತ್ತೇನೆ. ನಾನು ಯಾವುದೇ ದಾಖಲೆ ಪರಿಶೀಲಿಸದೆ ಲೋಕಾಯುಕ್ತ ಪೊಲೀಸರ ಕೋರಿಕೆ ಮೇರೆಗೆ ಕೊಟ್ಟಿರುವುದು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**